ಹೇಳಲಿಲ್ಲ. ಆವತ್ತೇ ನಮ್ಮ ಶೌಕತ್‌ಗೆ ಫೋನ್ ಮಾಡಿ ಸ್ವಾಮಿಗಳು ಜಮೀನು ಕೊಡು ಅಂತ ಕೇಳಿದರು ಅಂದೆ. ಅದಕ್ಕವನು ಕೊಡಲ್ಲ ಅನ್ನು ಅಂದ. ಅವನು ದುರ್ಗದಲ್ಲಿದ್ದಾನೆ. ಅವನಷ್ಟು ಖಡಕ್ಕಾಗಿ ನಾನು ಮಾತಾಡಕಾಗಲ್ಲ...' ಎನ್ನುತ್ತ ರಾಮಣ್ಣನ ಮುಖ ನೋಡಿದ.

'ಈ ಮಠದವರಿಗೆ ಹೊಸಳ್ಳಿ ಉಸಾಬರಿ ಯಾಕೆ ಬೇಕೋ? ನಮ್ ಸುಧಾಕರ ಸ್ಕೂಲು ಶುರು ಮಾಡಬೇಕು ಅಂತಿರೋದು ಎಲ್ಲರಿಗೂ ಗೊತ್ತಿದೆ. ಈಗ ಅದಕ್ಕೆ ಕಲ್ಲು ಹಾಕಕೆ ಹೊರಟಿದ್ದಾರೆ... ಯಾರದೊ ತಾಳಕ್ಕೆ ಈ ಸಣ್ಣಸ್ವಾಮಿ ಕುಣಿತಿರೊ ಹಂಗೆ ಕಾಣ್ತದೆ... ಈ ಕಾಲದಲ್ಲಿ ಇಂಗ್ಲಿಷ್ ಸ್ಕೂಲು ಲಾಭದ ವ್ಯವಹಾರ. ಸಲೀಸಾಗಿ ಸಾವಿರಾರು ರೂಪಾಯಿ ದುಡೀಬೌದು ಅಂತ. ತಮ್ಮ ಕೆಲಸ ಬಿಟ್ಟು ಇಂಗ್ಲಿಷ್ ಕಲಿಸೊ ವ್ಯಾಪಾರ ಮಾಡಕೆ ಮಠದವರು ಹೊರಟಿದ್ದಾರೆ. ನೀನೇನೂ ಹೆದರಬೇಡ. ಊರು ನಿನ್ನ ಜತೆ ಐತೆ. ಒಂದ್ ಕೆಲ್ಸ ಮಾಡು. ಸೂಗೂರಿಗೆ ಹೋಗಿ ದೊಡ್ಡ ಸ್ವಾಮಿಗಳ ಹತ್ರ ಮಾತಾಡು... ಜಮೀನಿನಲ್ಲಿ ನಮ್ಮ ಹಿರಿಯರ ಸಮಾಧಿಗಳಿವೆ ಅನ್ನು. ಅದೇನು ಹೇಳ್ತಾರೊ ನೋಡನ...

ಗೋಮಾಳವನ್ನು ಲೀಸ್‌ಗೆ ಕೊಡಿ ಅಂತ ಮತ್ತೆ ಅರ್ಜಿ ಹಾಕಿದಾರಂತೆ! ಅವರಿಗಿಂತ ಮೊದಲು ನಮ್ಮ ಸ್ಕೂಲಿಗೆ ಕೊಡಿ ಅಂತ ಸುಧಾಕರ ಅರ್ಜಿ ಕೊಟ್ಟಿದ್ದ. ಅದಿನ್ನೂ ಇತ್ಯರ್ಥ ಆಗಿಲ್ಲ. ಅದೆಂಗೆ ಅವರು ಗೋಮಾಳ ತಗಂಡು ಅಲ್ಲಿ ಸ್ಕೂಲು ಶುರು ಮಾಡ್ತಾರೊ ನಾನೂ ನೋಡ್ತೀನಿ... ನೀನು ಹೆದರಬೇಡ' ಅಂತ ರಾಮಣ್ಣ ಮತ್ತೆಮತ್ತೆ ಹೇಳಿದರೂ ಮೊದೀನ್‌ಗೆ ಭಯ ಹೆಚ್ಚಾಗುತ್ತ ಹೋಯಿತು.

★★★

ಗೋಮಾಳವನ್ನು ಸೂಗೂರು ಶ್ರೀ ಮಠದ ಶಿಕ್ಷಣ ಮಂಡಳಿಗೆ 99 ವರ್ಷಕ್ಕೆ ಲೀಸ್‌ಗೆ ಕೊಡಬಹುದು ಅಂತ ತಹಸೀಲ್ದಾರ್ ಮಾಡಿದ್ದ ಶಿಫಾರಸು ಒಪ್ಪಿ ಡಿಸಿ ಸಾಹೇಬರು ಕಳೆದ ವಾರವೇ ಸರ್ಕಾರಕ್ಕೆ ಪ್ರಸ್ತಾವ ಕಳಿಸಿದ್ದಾರೆ ಅನ್ನೋ ಅಧಿಕೃತ ಮಾಹಿತಿ ಡಿಸಿ ಆಫೀಸಿಗೆ ಯಾವುದೋ ಕೆಲಸಕ್ಕೆ ಅಂತ ಹೋಗಿದ್ದ ಹೊಸಳ್ಳಿ ಪಂಚಾಯ್ತಿಯ ಪಿಡಿಓ ಧನಂಜಯ ಸ್ವಾಮಿಗೆ ಗೊತ್ತಾಯಿತು. ತಕ್ಷಣವೇ ಅಲ್ಲಿಂದಲೇ ಪ್ರೆಸಿಡೆಂಟರಿಗೆ ಫೋನ್ ಮಾಡಿ ತಿಳಿಸಿದ. ಊರಿನ ಹಲವರಿಗೆ ಅವನೇ ಫೋನ್ ಮಾಡಿ ಹೇಳಿದ. ಸುದ್ದಿ ಗೊತ್ತಾಗಿದ್ದೇ ಊರು ಎದ್ದು ಕುಳಿತುಕೊಂಡಿತು! ಗೋಮಾಳ ಪರಭಾರೆ ಆಗೋದನ್ನು ಮೊದಲು ತಡೀಬೇಕು ಅಂತ ಎಲ್ಲರೂ ನಿರ್ಧರಿಸಿದರು. ಅಗತ್ಯ ಬಿದ್ದರೆ ಡಿಸಿ ಆಫೀಸಿನ ಮುಂದೆ ಉಪವಾಸ ಕೂರಲು ರೆಡಿ ಅಂತ ಕೆಲವರು ಘೋಷಿಸಿಕೊಂಡು ಪ್ರೆಸಿಡೆಂಟರಿಗೂ ಹೇಳಿದರು, 'ನೀವು ಏನು ಮಾಡ್ತಿರೊ ಗೊತ್ತಿಲ್ಲ' ಎಂದು. ತಕ್ಷಣಕ್ಕೆ ಏನು ಮಾಡಬೇಕು ಅನ್ನೋದು ಗೊತ್ತಾಗದೆ ಪ್ರೆಸಿಡೆಂಟರು ಚಡಪಡಿಸಿದರು. ಇವತ್ತು ರಾತ್ರಿ ಎಲ್ಲರೂ ಕೂತು ಮಿಟಿಂಗ್ ಮಾಡಿ ತೀರ್ಮಾನ ಮಾಡನ ಅಂತ ಹೇಳಿ ಎಲ್ಲರನ್ನೂ ಸಾಗಹಾಕಿದರು. ಆಮೇಲೆ ವಿಶ್ವನಾಥನಿಗೆ ಫೋನ್ ಮಾಡಿ ಗೋಮಾಳಕ್ಕೆ ಸಂಬಂಧಿಸಿದ ದಾಖಲೆಗಳು ನಿಮ್ಮನೆಯಲ್ಲಿರಬೌದು ಹುಡುಕು ಅಂದರು.

ರಾತ್ರಿ ಎಂಟರ ಹೊತ್ತಿಗೆ ಪಂಚಾಯ್ತಿ ಆಫೀಸಿನ ಮುಂದಿನ ಬಯಲಲ್ಲಿ ಊರ ಪ್ರಮುಖರು ಸೇರಿದರು. 'ಈ ಸರ್ಕಾರಕ್ಕೆ ಊರವರು ಲೆಕ್ಕಕ್ಕೇ ಇಲ್ಲ. ಸಿಎಂಗೆ ಮಠದವರ ಮಾತೆಂದರೆ ವೇದ ವಾಕ್ಯ. ನಾವು ಅವರನ್ನು ನಂಬಿಕೊಂಡು ಕೂರೋದು ಬೇಡ. ನಾವೇ ಏನಾದರೂ ಮಾಡಬೇಕು. ಆವತ್ತೇ ವಿಶ್ವನಾಥನ ಮಾತು ಕೇಳಿದ್ದರೆ ಗೋಮಾಳ ಉಳೀತಿತ್ತು. ಈಗಲೂ ಕಾಲ ಮಿಂಚಿಲ್ಲ. ಗೋಮಾಳ ಒತ್ತುವರಿ ಆಗಿದೆ ಅಂತ ನಾಳೆಯೇ ಸಿವಿಲ್ ಕೋರ್ಟಿಗೆ ಅರ್ಜಿ ಹಾಕಣ...' ಅಂತ ಕೆಲವರು ಹೇಳಿ ಪ್ರೆಸಿಡೆಂಟರ ಪ್ರತಿಕ್ರಿಯೆಗೆ ಕಾದರು.

ಸ್ವಲ್ಪ ತಡವಾಗಿ ಅಲ್ಲಿಗೆ ಬಂದ ವಿಶ್ವನಾಥನ ಕೈಯಲ್ಲಿ ಮಾಸಲು ಬಣ್ಣಕ್ಕೆ ತಿರುಗಿದ್ದ ಒಂದೆರಡು ಕಾಗದಗಳಿದ್ದವು. ಅವು 1941ನೇ ಇಸವಿಯ ದಾಖಲೆಗಳಂತೆ! ಅದರಲ್ಲಿ ಗೋಮಾಳದ ವಿಸ್ತೀರ್ಣ ಹದಿನೈದು ಎಕರೆ ಅಂತ ಇದೆಯಂತೆ! ಅದರಲ್ಲಿ ಎರಡೆಕರೆಯನ್ನು 1949ರಲ್ಲಿ ಮೈಸೂರು ಸರ್ಕಾರ